ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

Friday, the 14th May 1976/Vaishaka 24, 1898 S. E.

The House met in the Assembly Chamber, Vidhana Soudha, at One of the Clock.

[MADAM SPEAKER (SMT. K. S NAGARATHNAMMA) in the Chair.]

STARRED QUESTIONS
(to which oral answers were given)

Waiving of penal interest on Government loan recoverable from farmers

423. SRI H. T. KRISHNAPPA (Nagamangala) Will the Minister for Revenue be pleased to state.—

Whether Government have taken any decision to write off penal interest in respect of Government loans recoverable from farmers?

SRI N. HUTCHAMSTHY GOWDA (Minister for Revenue).—Yes. If the loanee repays the entire overdue instalments of the loans advanced along with simple interest within the period of six months from the date of Government Order indicated below the penal interest leviable on overdue loan instalments will be waived.

(i) Loans advanced by the Department of Agriculture for purchase of Tractors, from the date of issue of Government Order dated 13th August 1975.

(ii) In respect of all other loans advanced by the Revenue Department under the Karnataka Agricultural Loans Act 1963 and the Karnataka Land Improvement Loans Act 1963 including the loans advanced under liberalised rules, from the date of issue of the Government Order dated 6th February 1976

ಶ್ರೀ ಎಚ್.ಟಿ. ಕೃಷ್ಣಪ್ಪ.—ಸ್ಯಾಮ್, ಈ ನುಸ್ಪಿಬಡ್ಡಿಯನ್ನು ಮನ್ನಾ ಮಾಡಿರತಕ್ಕಂಥ ಹುಕುಂನ್ನು ಯಾವ ದಿವನದಿಂದ ಜಾರಿಗೆ ಕೊಟ್ಟಿದ್ದೀರಿ? ಎಲ್ಲಯತನಕ ಆದು ಮುಂದುನರೆಯು ತ್ತದೆ ಎನ್ನುವುದು ತಿಳಿನುತ್ತೀರಾ?

†ಶ್ರೀ ಹುಚ್ಚಮಾಸ್ತಿಗೌಡ —ಮೊದಲನೆಯದಾಗಿ, ಈ ಟ್ರಾ್ಯಕ್ಟರ್ ಲೋನ್‌ಗೆ ಸಂಬಂಧ ಪಟ್ಟಹಾಗೆ 13-8-1975ರಲ್ಲಿ ಆರ್ಡರ್ ಆಗಿದೆ ಆ ತಾರೀಖಿನಿಂದ ಜಾರಿಗೆ ಬರಬೇಕೆಂದು ಆರ್ಡರ್ ಆಗಿದೆ. ಮಂತ್ರಿ ತಕಾವಿ ಲೋನ್‌ಗೆ ಸಂಬಂಧಪಟ್ಟಹಾಗೆ ಆರ್ಡರ್ ಆಗಿರತಕ್ಕಂಥದ್ದು 6-2-1976 ರಿಂದ, ಅದು ಅವತ್ತಿನಿಂದ ಜಾರಿಗೆ ಬರುತ್ತದೆ ಇದರ ಜೊತೆಗೆ ಪಂಪ್ ಸೆಟ್ ಮತ್ತು ಪವರ್ ಟಿಲ್ಲರ್ ಲೋನ್‌ಗೋಸ್ಕರ ಒಂದು ಆರ್ಡರ್ ಆಗಿದೆ ಇದು ಸಹ 6-3-1976ರಿಂದ ಜಾರಿಗೆ ಬರುತ್ತದೆ. ಜಾರಿಗೆ ಬಂದ 6 ತಿಂಗಳೊಳಗಾಗಿ ಅವರು ಆನಲು ಮತ್ತು ಸರಳ ಬಡ್ಡಿಯನ್ನು ವಾಪಸ್ಸು ಕೊಟ್ಟರೆ ಅವರ ಮೇಲೆ ಹಾಕಿರತಕ್ಕಂಥ ಚಕ್ರ ಬಡ್ಡಿಯನ್ನು ಮನ್ನಾ ಮಾಡತಾಗುತ್ತದೆ

ಶ್ರೀ ಎಚ್. ಟಿ. ಕೃಷ್ಣಪ್ಪ. 6 ತಿಂಗಳ ಅವಧಿ ಎಂದರೆ ಅದು ಆಗಸ್ಟ್ ತಿಂಗಳಿಗೆ ಮುಗಿಯುತ್ತದೆ. ಆ ಸಮಯದಲ್ಲಿ ರೈತರಿಗೆ ಯಾವ ಆದಾಯ ಸಹ ಬರುವುದಿಲ್ಲ ಎನ್ನುವುದನ್ನು ತಿಳಿದೇ ಕೊಂಡಿದ್ದೇನೆ. ಯಾಪ ಬೆಳೆ ಕೂಡ ಅವರ ಕೈಗೆ ಬರುವುದಿಲ್ಲ. ಆದುದರಿಂದ ಅವರು ತೆಗೆದು ಕೊಂಡಿರತಕ್ಕಂಥ ಸಾಲವನ್ನು ಯಾವ ತೊಂದರೆ ಇಲ್ಲದೇನೆ ಮರು ಪಾವತಿ ಮಾಡಲು ಈ ವರ್ಷದ ಅಖೈರ್‌ವರೆಗೂ ವಿಸ್ತರಿಸುತ್ತೀರಾ? ಏತಕ್ಕಂದರೆ ಇದರಿಂದ ಅವರಿಗೂ ಸಹ ಬೆಳೆ ಕೈಗೆ ಬಂದಿರುತ್ತದೆ ಅದರಿಂದ ಅವರಿಗೂ ಅನುಕೂಲವಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಟ್ರಾ್ಯಕ್ಟರ್ ಸಾಲಕ್ಕೆ ಸಂಬಂಧಪಟ್ಟಹಾಗೆ ಇದ್ದ ಆರು ತಿಂಗಳ ವಾಯಿದೆ ಈಗಾಗಲೇ ಗತಿಸಿಹೋಗಿದೆ ಇನ್ನುಳಿದ ಎರಡಕ್ಕೆ ಸಂಬಂಧ ಪಟ್ಟಹಾಗೆ ವಾಯಿದೆ ಇದೆ ಇದರ ಫಲತಾಂಶ ಯಾವ ರೀತಿಯಾಗುತ್ತದೆ ಎಂಬದನ್ನು ನೋಡಿ, ಸರ್ಕಾರ ಪುನರಾಲೋಚನೆ ಮಾಡಬೇಕಾಗುತ್ತದೆ;

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳಿಗೆ ಗೊತ್ತಿರುವಂತೆ, ಇವತ್ತು ರೈತ ಬೆಳೆದ ಆಹಾರ ಪದಾರ್ಥಗಳ ಬೆಲೆ ತೀವ್ರವಾಗಿ ಕುಸಿದಿದೆ ಆಹಾರ ಪದಾರ್ಥಗಳ ಬೆಲೆ ಹೆಚ್ಚು ಇದ್ದಾಗ ಅವರು ಹೆಚ್ಚು ಸಾಲ ಮಾಡಿದ್ದರು. ಆದರೆ, ಈಗ ಆಹಾರ ಪದಾರ್ಥಗಳ ಬೆಲೆ ಕುಸಿದಿರುವುದರಿಂದ. ಅವರಿಗೆ ಬರುವ ಆದಾಯ ಕಡಿಮೆಯಾಗಿದೆ ಆದುದರಿಂದ, ಅವರು ಕೊಡಬೇಕಾದ ಸರಳ ಬಡ್ಡಿಯನ್ನು ಕಡಿಮೆ ಮಾಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡುವರೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ಹೋಗಿದ್ದಾಗಲೂ ರೈತರು ಸಾಲ ತೀರಿಸುವ ಮನಸ್ಸು ಮಾಡಲಲ್ಲ. ಈಗ ಆಹಾರ ಪದಾರ್ಥಗಳ ಬೆಲೆ ಕಡಿಮೆಯಾಗಿರುವುದು ಗೊತ್ತು. ಆಹಾರ ಪದಾರ್ಥಗಳ ಬೆಲೆ ಹೆಚ್ಚಾಗಲೀ ಅಥವಾ ಕಡಿಮೆಯಾಗಲೀ ಚಕ್ರಬಡ್ಡಿ ಹೊರೆ ಜಾಸ್ತಿಯಾಗಿ ರೈತರ ಮೇಲೆ ಬೀಳುತ್ತಿದೆ ಎಂದು ತಿಳಿದೇ ಸರ್ಕಾರದವರು ಅದಕ್ಕೆ ವಿನಾಯಿತಿ ಕೊಟ್ಟಿದ್ದಾರೆ. ಸರ್ಕಾರ ಹಣ ಕೊಡಬೇಕಾದರೂ ರಿಜರ್ವ್ ಬ್ಯಾಂಕಿನಿಂದ ಸಾಲ ಪಡೆದು, ಆನಂತರ ಕೊಡಬೇಕಾಗುತ್ತದೆ. ಸಾಲ ಪಡೆದು ಸರ್ಕಾರ ಹಣ ಕೊಡಬೇಕಾಗಿರುವುದರಿಂದ ಸರಳ ಬಡ್ಡಿಯನ್ನು ಕಡಿಮೆ ಮಾಡುವುದಾಗಲೀ ಅಥವಾ ವಜಾ ಮಾಡುವುದಾಗಲೀ ಸಾಧ್ಯವಾಗಲಿಕ್ಕಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಹೆಚ್. ಟಿ ಕೃಷ್ಣಪ್ಪ —ಈಗ 'ದೇವರು ವರ ಕೊಟ್ಟರೂ ಪೂಜಾರಿ ವರ ಕೊಡದ' ಹಾಗೆ ಆಗಿದೆ. ಸರ್ಕಾರದವರೇನೋ ರೈತರಿಗೆ ಒಳ್ಳೆಯದಾಗಲೀ ಎನ್ನುವ ಉದ್ದೇಶದಿಂದ ಈ ಹುಕುಂ ಅನ್ನು ಹೊರಡಿಸಿದರು. ಆದರೆ, ಕೆಲವು ತಂಟೆಕೋರ ಅಧಿಕಾರಿಗಳು ರೈತರಿಗೆ ಹಿಂಸೆ ಕೊಡುತ್ತಿದ್ದಾರೆ. ಈಗ ರೈತರ ಕಷ್ಟ ಏನು ಎನ್ನುವುದು ಎಲ್ಲರಿಗೂ ಗೊತ್ತಿದೆ; ಅವರು ಎಲ್ಲಿಯಾದರೂ ಸಾಲ ಮಾಡಲಿಕ್ಕೆ ಹೋಟರೆ, ಎಲ್ಲೂ ಸಿಕ್ಕುವುದಿಲ್ಲ ಆದುದರಿಂದ ರೈತರಿಗೆ ಸ್ವಲ್ಪ ಅನುಕಂಪ ತೋರಿ, ಹಣ ವಸೂಲಿ ಮಾಡುವಾಗ ಬಲವಂತದಿಂದ ಮಾಡಬಾರದೂ ಎಂದು ಮಾನ್ಯ ಮಂತ್ರಿಗಳು ಅಧಿಕಾರಿಗಳಿಗೆ ಆದೇಶ ನೀಡುವರೆ?

---

† Indicates that remarks or speeches have not been revised by the member concerned.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಲವಂತದಿಂದ ಮಾಫಸ್ಸಾನ ಮಾಡಿಸಿದರೆ ಫಲ ಸಿಗುತ್ತದೆ ಎಂದು, ಬಲವಂತ ಮಾಡುತ್ತಿದ್ದೇವೆ. ಬಲವಂತ ಮಾಡಬೇಡಿ ಎಂದರೆ, ನಾವು ಮಾಡುವುದಿಲ್ಲ. ಆಗ ಅವರಿಗೆ ವಿನಾಯಿತಿ ಸಿಕ್ಕುವುದಿಲ್ಲ

ಶ್ರೀ ಸಿ. ಬೈರೇಗೌಡ – ಆಹಾರ ಪದಾರ್ಥಗಳ ಬೆಲೆ ಇಳಿದಿದೆ ಎಂದು ಮಾನ್ಯ ಮಂತ್ರಿಗಳೇ ಹೇಳುತ್ತಿದ್ದಾರೆ. ಸರಕಾರೀ ರಂಗದಿಂದಲೂ ಮತ್ತು ಸಹಕಾರಿ ರಂಗದಿಂದಲೂ ಸಾಲ ಪಡೆದಿರುವುದನ್ನು ಹೋಲಿಸಿ ನೋಡುವುದಾದರೆ, ಪವರ್ ಟಿಲ್ಲರ್ ಮತ್ತು ಟ್ರಾಕ್ಟರುಗಳನ್ನು ದೊಡ್ಡ ದೊಡ್ಡ ರೈತರು ಸರಕಾರೀ ರಂಗದಿಂದಲೂ ಮತ್ತು ಸಣ್ಣ ಸಣ್ಣ ರೈತರು ಭೂ ಅಭಿವೃದ್ಧಿಗಾಗಿ ಮತ್ತು ಬೆಳೆಗಳ ಮೇಲೆ ಸಹಕಾರಿ ರಂಗದಿಂದಲೂ ಸಾಲ ತೆಗೆದುಕೊಂಡಿರುವುದು ಗೊತ್ತಾಗುತ್ತದೆ. ಸಹಕಾರಿ ರಂಗದಿಂದ ಸಾಲ ಪಡೆದಿರತಕ್ಕ ರೈತರು ಸಾಮಾನ್ಯವಾಗಿ ಸಣ್ಣ ಸಣ್ಣ ರೈತರು ಆದರಿಂದ ಸರ್ಕಾರದವರಂ ನೀತಿಗುವ ವಿನಾಯಿತಿಯನ್ನು ಸಹಕಾರಿ ರಂಗಕ್ಕೂ ಅನ್ವಯಿಸಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದಕ್ಕೆ ಮಾನ್ಯ ಮಂತ್ರಿಗಳಿಂ ಮನಸ್ಸು ಮಾಡುವರೆ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಇದನ್ನು ನಾನಂ ಹೇಳುವ ಸ್ಥಿತಿಯಲ್ಲಿಲ್ಲ. ಸರ್ಕಾರ ಚೆನ್ನಾಗಿ ಆಲೋಚನೆ ಮಾಡಿ, ವಂಶೂರಂ ಭಾಗಗಳಲ್ಲಿ ಮಾತ್ರ ವಿನಾಯಿತಿ ಕೊಡಬೇಕೆಂದು ತೀರ್ಮಾನ ಮಾಡಿ, ಆಜ್ಞೆ ಮಾಡಿದೆ. ಇವುಗಳ ಫಲಿತಾಂಶ ಯಾವ ರೀತಿ ಆಗುತ್ತದೆ ಎಂದು ಹೇಳುವ ಸ್ಥಿತಿಯಲ್ಲೂ ನಾನಿಲ್ಲ. ಮಾನ್ಯ ಸದಸ್ಯರು, ಸಹಕಾರ ಸಂಘಗಳ ಸಾಲವನ್ನೂ ಇದಕ್ಕೆ ಅನ್ವಯಿಸಬೇಕೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಹೇಳುವ ಸ್ಥಿತಿಯಲ್ಲಿ ಈಗ ನಾನಿಲ್ಲ.

Acquisition of land belonging to workers of Indian Aluminium Factory Belgaum.

643. SRI B. B. SAYANAK (Belgaum). Will the Minister for Excise and Labour be pleased to state :—

(*a*) the number of persons who are working in the Indian Aluminium Factory in Belgaum.

(*b*) out of those, how many are from Belgaum proper and how many are from other States.

(*c*) the number of persons whose lands had been acquired for the factory, but were not given jobs.

(*d*) the number of person who have given land to the said factory ?

SRI S. M. YAHYA (Minister for Excise and Labour).—

(*a*) 1261. (This does not include casual and/or contract workers)

(*b*) From Belgaum : 702
From Karnataka excluding Belgaum : 291
From other States : 268

(*c*) and (*d*) Lands belonging to 688 Khatedars were acquired. So far 100 dependents of these Khatedars have been provided with jobs.

SRI B. B. SAYANAK.–In all, 688 Khatedars have given their lands to the factory. Out of them only 100 dependents of the Khatedars have been given jobs. May I know why the dependents of other Khatedars have not been given jobs ?